**ಸಾಕ್ಷಿಯನ್ನು ದಿನಾಂಕ 01-09-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಆರ್.ಎಂ ವಕೀಲರಿಂದಃ**

1. ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸ್ವಂತ ಊರು ದಾವಣಗೆರೆ ವಿದ್ಯಾನಗರ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಅಪ್ರಾಪ್ತ ಮಗ ಪರವಾಗಿ ನಾನೇ ಬರೆಸಿದ್ದೇನೆ. ನಾನು ಹೇಳಿದಂತೆ ಸದರಿ ಪ್ರಮಾಣ ಪತ್ರ ಬರೆಯಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಓದಲು–ಬರೆಯಲು ಬರುವುದಿಲ್ಲ.

2. ನನ್ನ ಮದುವೆ ರುದ್ರೇಶ್ ರವರ ಜೊತೆ ಸಾಗರದ ಚೌಡೇಶ್ವರಿ ದೇವಸ್ಥಾನದಲ್ಲಿ ನಡೆದಿತ್ತು. ಸದರಿ ವಿಷಯವನ್ನು ನನ್ನ ವಾದ ಪತ್ರ ಅಥವಾ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಮದುವೆಯಾದ ನಿಖರವಾದ ಯಾವ ದಿನಾಂಕ, ತಿಂಗಳು ಮತ್ತು ವರ್ಷ ಎಂದು ನನಗೆ ನೆನಪಿಲ್ಲ. ನಮ್ಮ ಮದುವೆ ಆಗಿದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ಸಾಕ್ಷಿ ಪುನಃ ಫೋಟೋ ತೆಗೆದಿಲ್ಲ ಮತ್ತು ಮದುವೆ ನೊಂದಣಿ ಮಾಡಿಸಿಲ್ಲ ಎನ್ನುತ್ತಾರೆ.

3. ನಾನು ಲಂಬಾನಿ ಸಮುದಾಯಕ್ಕೆ ಸೇರಿದ್ದೇನೆ ಎಂದರೆ ಸರಿ. ರುದ್ರೇಶ್ ಲಿಂಗಯತ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ನಿಮ್ಮ ಮದುವೆ ಯಾವ ಸಮುದಾಯ ಸಂಪ್ರಾದಯದ ಪ್ರಕಾರ ನಡೆಯಿತು ಎಂಬ ಪ್ರಶ್ನೆಗೆ ಸಾಕ್ಷಿ ತಾಳಿ ಮಾತ್ರ ಕಟ್ಟಿಕೊಂಡಿದ್ದೇನೆ ,

ಯಾವ ಸಂಪ್ರಾದಾಯವನ್ನು ಆಚರಿಸಿಲ್ಲ ಎನ್ನುತ್ತಾರೆ. ಸದರಿ ಮದುವೆಗೆ ನನ್ನ ಗಂಡನ ಸ್ನೇಹಿತರು ಬಂದಿದ್ದರು. ಸಾಕ್ಷಿ ಸ್ವ ಇಚ್ಚೆಯಿಂದ ಅವರೆಲ್ಲಾ ಈಗ ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಕಡೆಯಿಂದ ಮದುವೆಗೆ ಯಾರು ಬಂದಿಲ್ಲ. ಸಾಕ್ಷಿ ಪುನಃ ಯಾರಿಗೂ ಹೇಳಿರಲಿಲ್ಲ ಎನ್ನುತ್ತಾರೆ. ಮದುವೆ ಸಂದರ್ಭದಲ್ಲಿ ಸಪ್ತಪದಿ ಆಚರಣೆ ಆಗಿಲ್ಲ.

4. ಸಾಮಾನ್ಯವಾಗಿ ಮದುವೆ ಕಾರ್ಯಕ್ರಮದಲ್ಲಿ ವಧು–ವರರ ಕಡೆಯವರಿಬ್ಬರು ಹಾಜರಿರುತ್ತಾರೆ ಎಂದರೆ ಸರಿ. ನನ್ನ ಮತ್ತು ರುದ್ರೇಶ್ ರವರ ನಡುವೆ ನಡೆದಿದೆ ಎನ್ನಲಾದ ಮದುವೆಯ ಸಂದರ್ಭದಲ್ಲಿ ಯಾವ ಸಂಪ್ರಾದಾಯ ಅಥವಾ ಪದ್ದತಿಯನ್ನು ಆಚರಿಸಿಲ್ಲ ಹಾಗೂ ನಮ್ಮಿಬ್ಬರ ಕುಟುಂಬದವರು ಹಾಜರಿರಲಿಲ್ಲ ಎಂದರೆ ಸರಿ. ನಮ್ಮ ಮದುವೆ ಮಾಡಿಸಿದ ದೇವಸ್ಥಾನದ ಆರ್ಚಕರಿಂದ ಯಾವುದೇ ದಾಖಲೆ ಬರೆಸಿಕೊಂಡಿಲ್ಲ.

5. ನಮ್ಮ ಮದುವೆಯಾದ ನಂತರ ನಾನು ಮತ್ತು ರುದ್ರೇಶ್ ಸಾಗರದಲ್ಲಿ ವಾಸವಿದ್ದೆವು. ಯಾವ ಏರಿಯಾದಲ್ಲಿ ನಮ್ಮ ಮನೆ ಇತ್ತು ಎಂದು ನನಗೆ ನೆನಪಿಲ್ಲ. ಅದರ ವಿಳಾಸ ನನಗೆ ನೆನಪಿಲ್ಲ. ಬಾಡಿಗೆ ಮನೆಯಲ್ಲಿ ವಾಸವಿದ್ದೆವು. ಸದರಿ ಮನೆಯ ಮಾಲಿಕರ ಹೆಸರು ಮಲ್ಲಿಕಾರ್ಜುನಪ್ಪ. ಬಾಡಿಗೆ ಕರಾರು ಆಗಿಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ಒಬ್ಬ ಪರಿಚಯಸ್ಥರು ನಮ್ಮನ್ನು ಸದರಿ ಮನೆಗೆ ಕಳುಹಿಸಿದ್ದರು ಮತ್ತು ಅಲ್ಲಿ 3 ವರ್ಷ ವಾಸವಿದ್ದೆವು ಎನ್ನುತ್ತಾರೆ. ಆ ಸಂದರ್ಭದಲ್ಲಿ ನಾನು ಮನೆಯಲ್ಲೇ ಇರುತ್ತಿದ್ದೆ ಮತ್ತು ನನ್ನ ಗಂಡನ ಹೋಟೇಲ್ ಕೆಲಸಕ್ಕೆ ಹೋಗುತ್ತಿದ್ದರು. ಹೋಟೇಲ್ ಮಾರಮ್ಮನ ದೇವಸ್ಥಾನದ ಬಳಿ ಇತ್ತು.

6. ನನ್ನ ಮದುವೆ ರುದ್ರೇಶ್ ರವರ ಜೊತೆ ಸಾಗರದ ಚೌಡೇಶ್ವರಿ ದೇವಸ್ಥಾನದಲ್ಲಿ ಆಗಿತ್ತು ಮತ್ತು ನಾವಿಬ್ಬರು ಸಾಗರದ ಬಾಡಿಗೆ ಮನೆಯಲ್ಲಿ 3 ವರ್ಷ ವಾಸವಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. 2017 ರಲ್ಲಿ ರುದ್ರೇಶ್ ಆತ್ಮಹತ್ಯೆ ಮಾಡಿಕೊಂಡರು. ಆ ಸಂಬಂಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತೋರಿಸುವ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಪೊಲೀಸ್ ದಾಖಲೆಗಳು ಹಾಗೂ ನ್ಯಾಯಾಲಯದ ತೀರ್ಪುಗಳಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ಸದರಿ ವಿಷಯವನ್ನು ನನ್ನ ವಾದ ಪತ್ರ ಅಥವಾ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಸಾಕ್ಷಿ ಪುನಃ ದಾಖಲೆ ಕೊಟ್ಟಿದ್ದೇನೆ ಎನ್ನುತ್ತಾರೆ.

8. ನಾನೇ ಸಲ್ಲಿಸಿರುವ ನಿ.ಪಿ.–22 ರಿಂದ 35 ರ ದಾಖಲೆಗಳ ಪ್ರಕಾರ ರುದ್ರೇಶ್ ರವರನ್ನು ನಾನೇ ಕೊಲೆ ಮಾಡಿದ್ದೇನೆ ಎಂದು ನನ್ನ ಮೇಲೆ ಪ್ರಕರಣ ದಾಖಲಾಗಿತ್ತು ಮತ್ತು ಆ ಸಂಬಂಧ ನನ್ನನ್ನು ದಸ್ತಗಿರಿ ಮಾಡಲಾಗಿತ್ತು ಎಂದರೆ ಸರಿ. ಸಾಕ್ಷಿ ಪುನಃ ನಾನು ಕೊಲೆ ಮಾಡಿಲ್ಲ ಎನ್ನುತ್ತಾರೆ. ಸದರಿ ಪ್ರಕರಣದ ಸಂಬಂಧ ನಾನು 1 ವರ್ಷ 1 ತಿಂಗಳು ಜೈಲಿನಲ್ಲಿದ್ದೆ ಎಂದರೆ ಸರಿ.

9. ನನ್ನ ಮದುವೆಯಾದಾಗ ನನಗೆ 18 ವರ್ಷ ಆಗಿತ್ತು. ನನ್ನ ಜನ್ಮ ದಿನಾಂಕಕ್ಕೆ ಸಂಬಂಧಪಟ್ಟ ದಾಖಲೆಗಳು ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಆಧಾರ್ ಕಾರ್ಡ್ ಕೊಟ್ಟಿದ್ದೇನೆ ಎನ್ನುತ್ತಾರೆ. ಮದುವೆ ಆಯಿತ್ತು

ಎನ್ನಲಾದ ಸಂದರ್ಭದಲ್ಲಿ ನನ್ನ ಅಥವಾ ರುದ್ರೇಶ್ ರವರ ಜನ್ಮ ದಿನಾಂಕದ ದಾಖಲೆಯನ್ನು ಅರ್ಜಕರಿಗೆ ಕೊಟ್ಟಿಲ್ಲ.

10. ಮದುವೆಯಾದ ನಂತರ ನಾನು ರುದ್ರೇಶ್ ರವರಜೊತೆ ಸಾಗರದಲ್ಲಿ 3 ವರ್ಷ ವಾಸವಿದ್ದೆ. ಆ ನಂತರ ನಮ್ಮಿಬ್ಬರ ನಡುವೆ ಜಗಳ ಆಗಿದ್ದರಿಂದ ನಾನು ಅವರನ್ನು ಬಿಟ್ಟು ಬೆಂಗಳೂರಿಗೆ ಹೋಗಿ 1 ½ ವರ್ಷ ಒಬ್ಬಳೇ ವಾಸವಿದ್ದೆ. ನಂತರ ನಾವಿಬ್ಬರು ಪುನಃ ಒಟ್ಟಾಗಿ ಹೊನ್ನಾಳ್ಳಿಯಲ್ಲಿ 2 ರಿಂದ 2 ½ ವರ್ಷ ವಾಸವಿದ್ದೆವು. ಆ ನಂತರ ಶಿವಮೊಗ್ಗಕ್ಕೆ ಬಂದು 5 ರಿಂದ 6 ವರ್ಷ ವಾಸವಿದ್ದೆವು. ನನ್ನ ಗಂಡನನ್ನು ಬಿಟ್ಟು ನಾನು ಬೆಂಗಳೂರಿಗೆ ಯಾವ ವರ್ಷ ಹೋದೆ ಎಂದು ನಿಖರವಾಗಿ ನೆನಪಿಲ್ಲ. ನಾನು ಬೆಂಗಳೂರಿಗೆ ಹೋದಾಗ ನನಗೆ ಮಕ್ಕಳಾಗಿರಲಿಲ್ಲ. ಹೊನ್ನಳ್ಳಿಯಲ್ಲಿ ನಾವು ಬಾಡಿಗೆ ಮನೆಯಲ್ಲಿ ಇದ್ದೆವು. ಆ ಸಂಬಂಧ ದಾಖಲೆ ಇಲ್ಲ. ಹೊನ್ನಳ್ಳಿಯಲ್ಲಿ ಯಾವ ವರ್ಷದಲ್ಲಿ ವಾಸವಿದ್ದೆವು ಎಂದು ನಿಖರವಾಗಿ ನೆನಪಿಲ್ಲ. ಹೊನ್ನಳ್ಳಿಯಲ್ಲಿ ನಾವು ವಾಸವಿದ್ದ ಏರಿಯಾದ ಹೆಸರು ನಿಖರವಾಗಿ ನೆನಪಿಲ್ಲ. ನಾವು ವಾಸವಿದ್ದ ಬಾಡಿಗೆ ಮನೆಯ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ನಾವು ಶಿವಮೊಗ್ಗಕ್ಕೆ ಬಂದ ನಂತರ ನಾನು ಗರ್ಭವತಿ ಆದೆ. ಸಾಕ್ಷಿ ಸ್ವ ಇಚ್ಚೆಯಿಂದ ಮಗು ಹುಟ್ಟಿದ್ದ 3 ದಿನಗಳ ನಂತರ ತೀರಿಕೊಂಡಿತು ಎನ್ನುತ್ತಾರೆ.

11. ಸಾಗರದಲ್ಲಿ ಮತ್ತು ಆ ನಂತರ ಹೊನ್ನಳ್ಳಿಗೆ ಬಂದು ನಾನು ಮತ್ತು ರುದ್ರೇಶ್ ಒಟ್ಟಿಗೆ ಜೀವನ ಮಾಡಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಗರ ಮತ್ತು ಹೊನ್ನಳ್ಳಿಯಲ್ಲಿ ನಾವು ವಾಸವಿದ್ದಾಗ ಪಡಿತರ ಚೀಟಿಯನ್ನು ಮಾಡಿಸಿಕೊಂಡಿರಲಿಲ್ಲ. ಒಂದು

ವೇಳೆ ನನ್ನ ಮದುವೆ ರುದ್ರೇಶ್ ಜೊತೆ ಆಗಿ ನಾವಿಬ್ಬರು ಒಟ್ಟಿಗೆ ವಾಸವಿದ್ದಲ್ಲಿ ಆ ಸಂಬಂಧ ನನ್ನ ಬಳಿ ದಾಖಲೆ ಇರುತ್ತಿತ್ತು, ನಮಗೆ ಮದುವೆ ಆಗಿಲ್ಲ ಮತ್ತು ನಾವು ಯಾವತ್ತು ಒಟ್ಟಿಗೆ ವಾಸವಿರಲಿಲ್ಲ ಹಾಗಾಗಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

12. ನಾವು ಶಿವಮೊಗ್ಗದಲ್ಲಿ ಯಾವ ವರ್ಷ ದಿಂದ ಯಾವ ವರ್ಷದವರೆಗೆ ವಾಸವಿದ್ದೆವು ಎಂದು ನನಗೆ ನಿಖರವಾಗಿ ನೆನಪಿಲ್ಲ. ಶಿವಮೊಗ್ಗದ ಪಿ.ಎನ್.ಟಿ ಗೇಟ್ ಹತ್ತಿರ ಗೆಜ್ಜೆನಹಳ್ಳಿ ರಸ್ತೆಯ ಎಡಭಾಗದಲ್ಲಿ ನಾವು ಬಾಡಿಗೆ ಮನೆ ಮಾಡಿಕೊಂಡಿದ್ದೆವು. ಆ ಸಂಬಂಧ ದಾಖಲೆಗಳು ಇಲ್ಲ. ಸದರಿ ಮನೆಯಲ್ಲೇ ನಾನು ಮತ್ತು ನನ್ನ ಗಂಡ 5-6 ವರ್ಷ ವಾಸವಿದ್ದೆವು. ಸದರಿ ಮನೆಯ ಮಾಲಿಕರ ಹೆಸರು ಆತಾ ಕೋಂ ಅಣ್ಣಪ್ಪ. ಸದರಿ ಮಾಲಿಕರಿಗೆ ಮನೆಯನ್ನು ಬಾಡಿಗೆ ಪಡೆಯುವಾಗ ಯಾವುದೇ ದಾಖಲೆಯನ್ನು ಕೊಟ್ಟಿರಲಿಲ್ಲ.

13. ರುದ್ರೇಶ್ ಮೂಲತಃ ಮಂಗೋಟೆ ಗ್ರಾಮದವರು. ಅವರಿಗೆ ಇಬ್ಬರು ಅಣ್ಣಂದಿರು ಮತ್ತು ಇಬ್ಬರು ತಮ್ಮಂದಿರು ಇದ್ದಾರೆ. ಅಕ್ಕ-ತಂಗಿಯರು ಇಲ್ಲ. ಅವರ ಸಹೋದರರ ಬಗ್ಗೆ ನನಗೆ ನನ್ನ ಗಂಡನೇ ಮದುವೆಯಾದಾಗ ಮಾಹಿತಿ ಕೊಟ್ಟಿದ್ದರು. ಅವರು ನಮ್ಮ ಮದುವೆಗೆ ಬಂದಿಲ್ಲ. ಸಾಕ್ಷಿ ಪುನಃ ಮದುವೆಯಾಗುವ 1 ತಿಂಗಳು ಮೊದಲು ನಾನು ಮತ್ತು ನನ್ನ ಗಂಡ ಅವರ ಮನೆಗೆ ಹೋಗಿದ್ದೆವು ಎನ್ನುತ್ತಾರೆ. ನನ್ನ ಗಂಡನ ಮನೆಗೆ ಹೋದ ದಿನ ನಾವು ಮದುವೆ ಆಗುತ್ತೇವೆ ಎಂದು ಅವರ ಅಣ್ಣ-ತಮ್ಮನಿಗೆ ತಿಳಿಸಿದ್ದೆವು. ಅವರ ಅಣ್ಣ-ತಮ್ಮಂದಿರ ಮನೆ ಆರ್.ಸಿ.ಸಿ ಮನೆಯೋ, ಹಂಚಿನ ಮನೆಯೋ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ. ನಾವು ಗಂಡನ ಚಿಕ್ಕಪ್ಪನ ಮನೆಗೆ ಹೋಗಿದ್ದೆವು ಎನ್ನುತ್ತಾರೆ. ಅವರ ಚಿಕ್ಕಪ್ಪನ ಹೆಸರು ನನಗೆ

ಗೊತ್ತಿಲ್ಲ. ರುದ್ರೇಶ್ ರವರ ತಂದೆಗೆ ಎಷ್ಟು ಜನ ಅಣ್ಣ–ತಮ್ಮಂದಿರು ಎನ್ನುವುದು ನನಗೆ ಗೊತ್ತಿಲ್ಲ. ನಾವು ಹೋಗಿದ್ದ ಮನೆ ಮಂಗೋಟೆ ಗ್ರಾಮದ ಮುಖ್ಯ ರಸ್ತೆಯ ಪಕ್ಕದಲ್ಲೇ ಇದೆ. ಸದರಿ ಮನೆ ಯಾವ ಬೀದಿಯಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ಮದುವೆಗೂ ಮೊದಲು ರುದ್ರೇಶ್ ರವರ ಚಿಕ್ಕಪ್ಪನ ಮನೆಗೆ ಹೋಗಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ಮದುವೆಯಾದ 7–8 ವರ್ಷಗಳ ನಂತರ ನನ್ನ ಮಗ ಹುಟ್ಟಿದ್ದ. ನನ್ನ ಮಗ ಹುಟ್ಟುವ 1 ವರ್ಷಕ್ಕೂ ಮೊದಲು 3 ದಿನದ ಹೆಣ್ಣು ಮಗು ತೀರಿಕೊಂಡಿತ್ತು. ಇಬ್ಬರು ಮಕ್ಕಳು ಹುಟ್ಟಿದ್ದ ಬಗ್ಗೆ ದಾಖಲೆಗಳು ಇದೆ. ವಾದಿಗೆ ಸಂಬಂಧಪಟ್ಟ ದಾಖಲೆ ಕೊಟ್ಟಿದ್ದೇನೆ. ಮೊದಲನೇ ಮಗುವಿನ ದಾಖಲೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿದೆ. ನಾನು ಗರ್ಭವತಿಯಾದಾಗ ಆಸ್ಪತ್ರೆಗೆ ಹೋದ ಎಲ್ಲಾ ದಾಖಲಾತಿಗಳು ಈಗ ನನ್ನ ಬಳಿ ಇಲ್ಲ. ನನ್ನ ಮಗನ ಹೆಸರು ಜ್ಞಾನೇಶ್. ಸಾಕ್ಷಿ ಸ್ವ ಇಚ್ಚೆಯಿಂದ ನನ್ನ ಮಗನ ಜನನ ಪ್ರಮಾಣ ಪತ್ರದಲ್ಲಿ ಜ್ಞಾನೇಶ್ ಎಂದೇ ನಮೂದಾಗಿದೆ ಮತ್ತು ನಾವು ಆತನನ್ನು ಮನೆಯಲ್ಲಿ ಕುಶಾಲ್ ಎಂದು ಕರೆಯುತ್ತೇವೆ ಹಾಗೂ ಪೊಲೀಸ್ ದಾಖಲಾತಿಗಳಲ್ಲಿ ಕುಶಾಲ್ ಎಂದೇ ಉಲ್ಲೇಖಿಸಿದ್ದಾರೆ ಎನ್ನುತ್ತಾರೆ. ಸದರಿ ವಿಷಯವನ್ನು ವಾದ ಪತ್ರ ಅಥವಾ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸಾಕ್ಷಿ ಪುನಃ ನಮ್ಮ ವಕೀಲರಿಗೆ ಹೇಳಿಲ್ಲ ಎನ್ನುತ್ತಾರೆ. 3 ದಿನದ ಹೆಣ್ಣು ಮಗು ಮೆಗ್ಗಾನ್ ಆಸ್ಪತ್ರೆಯಲ್ಲಿ ತೀರಿಕೊಂಡಿತ್ತು. ಅದರ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ. ಸದರಿ ದಾಖಲಾತಿಗಳನ್ನು ಕೊಡಲು ತೊಂದರೆ ಇಲ್ಲ ಎಂದರೆ ಸರಿ.

15. ನನ್ನ ಮಗ ಜ್ಞಾನೇಶ್ ಅಥವಾ 3 ದಿನಕ್ಕೆ ತೀರಿಕೊಂಡಿತ್ತು ಎನ್ನಲಾದ ಹೆಣ್ಣು ಮಗು ರುದ್ರೇಶ್ ದಲ್ಲ ಎಂದರೆ ಸರಿಯಲ್ಲ. ನಾನು 6 ನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರುದ್ರೇಶ್ ನನ್ನು ಮದುವೆಯಾಗಿದ್ದೆ ಎಂದು ಕಟ್ಟು ಕಥೆ ಸೃಷ್ಟಿಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ನನ್ನ ಪರವಾಗಿ ವಿಚಾರಣೆಗೆ ಒಳಪಡಿಸಿರುವ ಸಾಕ್ಷಿದಾರರಾದ ಲೋಕೇಶಪ್ಪ, ಮಲ್ಲೇಶಪ್ಪ ಮತ್ತು ಶೇಖರಪ್ಪ ಎಂಬುವವರು ನಾನು ನನ್ನ ಗಂಡನ ಊರಿಗೆ ಹೋದಾಗ ಪರಿಚಯವಾಗಿದ್ದರು. ಸಾಕ್ಷಿ ಪುನಃ ಪ್ರತಿವಾದಿಯರ ಬಳಿ ಆಸ್ತಿ ಕೇಳಲು ಹೋದಾಗ ಪರಿಚಯವಾದರು ಎನ್ನುತ್ತಾರೆ. ನನ್ನ ಗಂಡ ತೀರಿಕೊಳ್ಳುವ 1 ತಿಂಗಳ ಮೊದಲೇ ನಾನು ಆಸ್ತಿ ಕೇಳಲು ಹೋಗಿದ್ದೆ. ಆಸ್ತಿ ಕೇಳಲು ಯಾರ ಬಳಿ ಹೋಗಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಲಂಬಾಣಿ ಎಂಬ ಕಾರಣಕ್ಕೆ ನನ್ನ ಗಂಡನ ಕಡೆಯವರು ನನಗೆ ಹಾಗೂ ನನ್ನ ಗಂಡನಿಗೆ ಊರಿನ ಒಳಗೆ ಹೋಗಲು ಬಿಡದೆ ಹೋರ ಕಳುಹಿಸಿದರು ಎನ್ನುತ್ತಾರೆ. ಆ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿಲ್ಲ. ನನ್ನ ಗಂಡ ಬದುಕಿದ್ದಾಗ ಆಸ್ತಿಯಲ್ಲಿ ಪಾಲು ಕೇಳಿ ದಾವೆ ಹಾಕಿಲ್ಲ.

17. ರುದ್ರೇಶ್ ರವರ ಜನ್ಮ ದಿನಾಂಕಕ್ಕೆ ಸಂಬಂಧಪಟ್ಟ ದಾಖಲೆ ನನ್ನ ಬಳಿ ಇಲ್ಲ. ಸಾಕ್ಷಿ ಪುನಃ ಆಧಾರ್ ಕಾರ್ಡ್ ಕೊಟ್ಟಿದ್ದೇನೆ ಎನ್ನುತ್ತಾರೆ. ನನ್ನ ಜೊತೆ ಇದ್ದಾಗ ರುದ್ರೇಶ್ ಹೋಟೇಲ್ ಕೆಲಸಕ್ಕೆ ಹೋಗುತ್ತಿದ್ದರು. ಶಿವಮೊಗ್ಗದಲ್ಲಿ ಅವರು ಶುಭಂ ಹೊಟೇಲ್ ನಲ್ಲಿ ಕೆಲಸ ಮಾಡುತ್ತಿದ್ದರು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ನಿ.ಪಿ.–18 ರ ದಾಖಲೆಯನ್ನು ನನ್ನ ಗಂಡನೇ ಬರೆಸಿದ್ದರು. ಆ ರೀತಿ ಯಾವ ಆಧಾರದಲ್ಲಿ ಹೇಳುತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಗಂಡ ಮಾಹಿತಿ ಕೊಟ್ಟ ಬರೆಸಿದ್ದಾರೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ಗಂಡನ ಹೆಸರು ರುದ್ರೇಶ್ ಎಂಬುವುದಾಗಿ ಮಾತ್ರ ಇದೆ. ಸಾಕ್ಷಿ ಪುನಃ ಅವರ ಹೆಸರಿನ ಮುಂದೆ ಹೆಚ್.ಜಿ ಎಂದು ಬರೆಸಿಲ್ಲ ಎನ್ನುತ್ತಾರೆ. ನಿ.ಪಿ.– 18 ರ ದಾಖಲೆ ನಿಮಗೆ ಹೇಗೆ ಸಿಕ್ಕಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಅದನ್ನು ನನ್ನ ಗಂಡ ಮಾಡಿಸಿ ಮನೆಗೆ ತಂದಿದ್ದರು ಹಾಗಾಗಿ ಅದು ಮನೆಯಲ್ಲೇ ಇತ್ತು ಎನ್ನುತ್ತಾರೆ. ಸದರಿ ದಾಖಲೆಯನ್ನು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.– 18 ರ ದಾಖಲೆಯನ್ನು ಕೊಟ್ಟ ಅಧಿಕಾರಿಗಳನ್ನು ಸಾಕ್ಷಿಗೆ ಒಳಪಡಿಸಲು ತೊಂದರೆ ಇಲ್ಲ.

19. ನಿ.ಪಿ.–2 ರ ದಾಖಲೆಯನ್ನು ಈ ದಾವೆ ದಾಖಲಿಸಿದ ನಂತರ ಪಡೆಯಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಪಡೆಯಲು ನಾನೇ ನ್ಯಾಯಾಲಯಕ್ಕೆ ಅರ್ಜಿ ಕೊಟ್ಟು ಪಡೆದಿದ್ದೇನೆ. ರುದ್ರೇಶ್ ರವರ ತಂದೆಯ ಹೆಸರು ಗುಡ್ಡ ಮಲ್ಲಪ್ಪ ಮತ್ತು ತಾಯಿಯ ಹೆಸರು ಪಾರ್ವತಮ್ಮ. ಅವರ ತಾಯಿಯ ಹೆಸರನ್ನು ನಿ.ಪಿ.–2 ರ ದಾಖಲೆಯಲ್ಲಿ ಬರೆಸಿಲ್ಲ. ನಿ.ಪಿ.–2 ರ ದಾಖಲೆಯನ್ನು ನನ್ನ ಗಂಡನ ತೀರಿಕೊಂಡ ಸಂಬಂಧ ಪ್ರಕರಣ ದಾಖಲಾದ ನಂತರ ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳ ಆಧಾರದಲ್ಲಿ ಕೊಡಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಆದರೆ ಮರಣ ಪ್ರಮಾಣ ಪತ್ರ ಪಡೆಯಲು ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದೆ ಎನ್ನುತ್ತಾರೆ.

20. ನಿ.ಪಿ.–17 ರ ಪಡಿತರ ಚೀಟಿಯನ್ನು ನನ್ನ ಮಗ ಹುಟ್ಟಿದ್ದ 2 ವರ್ಷಗಳ ನಂತರ ಅಂದರೆ ಈಗ್ಗೆ ಸುಮಾರು 12 ವರ್ಷಗಳ ಹಿಂದೆ ಪಡೆದಿದ್ದೆ. ರುದ್ರೇಶ್ ರವರು ತೀರಿಕೊಂಡ ನಂತರ 2018 ರಲ್ಲಿ ನಿ.ಪಿ.–17 ರ ದಾಖಲೆಯನ್ನು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. 2018 ರಲ್ಲಿ ರುದ್ರೇಶ್ ಬದುಕಿರಲಿಲ್ಲ ಎಂದರೆ ಸರಿ. ಸಾಕ್ಷಿ ಪುನಃ ಅವರು ತೀರಿಕೊಳ್ಳುವ ಮೊದಲೇ ಪಡಿತರ ಚೀಟಿಗೆ ಅರ್ಜಿ ಕೊಟ್ಟಿದ್ದೆವು ಎನ್ನುತ್ತಾರೆ. ನಿ.ಪಿ.–12 ರ ಆಧಾರ್ ಕಾರ್ಡ್ ನ್ನು ನನ್ನ ಗಂಡ ಬದುಕಿದ್ದಾಗಲೇ ಮಾಡಿಸಲಾಗಿತ್ತು. ನಿ.ಪಿ.–12 ರಿಂದ 14 ರ ದಾಖಲೆಗಳನ್ನು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಹಾಗೂ ರುದ್ರೇಶ್ ರವರ ಆಧಾರ್ ಕಾರ್ಡ್ ಗಳಲ್ಲಿ ನಮ್ಮ ವಿಳಾಸ ಬೇರೆ ಬೇರೆ ಇದೆ ಎಂದರೆ ಸಾಕ್ಷಿ ನಾನು ಮನೆ ಬದಲಾವಣೆ ಮಾಡಿರುವುದರಿಂದ ನನ್ನ ಆಧಾರ್ ಕಾರ್ಡ್‌ನಲ್ಲಿ ಈಗ ವಿಳಾಸ ಬದಲಾವಣೆಯಾಗಿದೆ ಮತ್ತು ಹಳೆಯ ಆಧಾರ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ ಎನ್ನುತ್ತಾರೆ. ಹಳೆಯ ಆಧಾರ್ ಕಾರ್ಡ್ ನ್ನು 2012–13 ರಲ್ಲಿ ಮಾಡಿಸಿದ್ದೆ. ನಿ.ಪಿ.–12 ರ ದಾಖಲೆಯನ್ನು ಸೃಷ್ಟಿಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21. ನಿ.ಪಿ.– 20 ರ ದಾಖಲೆಯನ್ನು ನನ್ನ ಮದುವೆಯಾದ ನಂತರ ಮಾಡಿಸಲಾಗಿತ್ತು. ಯಾವ ವರ್ಷದಲ್ಲಿ ಮಾಡಿಸಲಾಗಿತ್ತು ಎಂದು ನಿಖರವಾಗಿ ನೆನಪಿಲ್ಲ. ಸದರಿ ದಾಖಲೆ ಪಡೆಯಲು ನಾನೇ ಮಾಹಿತಿ ಕೊಟ್ಟಿದ್ದೆ. ಸದರಿ ದಾಖಲೆ ನನ್ನ ಜಾತಿಗೆ ಸಂಬಂಧಪಟ್ಟ ಪ್ರಮಾಣ ಪತ್ರ ಆಗಿದೆ ಎಂದರೆ ಸರಿ. ರುದ್ರೇಶ್ ತೀರಿಕೊಂಡ ನಂತರ 2018 ರಲ್ಲಿ ನಿ.ಪಿ.–20 ಮತ್ತು

21 ರ ದಾಖಲೆಗಳನ್ನು ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಮಗನನ್ನು ಶಾಲೆಗೆ ಸೇರಿಸುವಾಗ ಆತನ ಜಾತಿಯನ್ನು ಲಂಬಾಣಿ ಎಂದು ಬರೆಸಿದ್ದೇನೆ. ಸಾಕ್ಷಿ ಸ್ವ ಇಚ್ಚೆಯಿಂದ ನನ್ನ ಗಂಡನಿಗೆ ಸಂಬಂಧಪಟ್ಟ ಜಾತಿ ದಾಖಲೆ ಸಿಗದೆ ಇದ್ದರಿಂದ ನನ್ನ ಜಾತಿಯನ್ನು ಬರೆಸಿದ್ದೇನೆ ಎನ್ನುತ್ತಾರೆ. ಸಾಮಾನ್ಯವಾಗಿ ಅಂತರ ಜಾತಿ ವಿವಾಹ ಆದ ನಂತರ ಹೆಂಡತಿಯನ್ನು ಗಂಡನ ಜಾತಿಗೆ ಸೇರಿಸಿಕೊಳ್ಳುತ್ತಾರೆ ಎಂದರೆ ಸಾಕ್ಷಿ ನಾನು ಸೇರಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**